ಈ) ಇಲ್ಲದಿದ್ದರೆ ಈ ಕೆಲಸಗಳನ್ನು ಮುಗಿಸಲು ಕಾಲಮಿತಿ (Time limit) ಹಾಕಲಾಗಿದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಭಾಲ್ಕಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ರೂ. 194.25 ಲಕ್ಷಗಳ ಯೋಜನಾ ವರದಿಯು ಮಂಜೂರಾಗಿದ್ದು, ಇದರಲ್ಲಿ ರೂ.72.83 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಮಂಜೂರಾಗಿರುವ ಕಾಮಗಾರಿಗಳು ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

		ಮಂಜೂರಾದ ಮೊತ್ತ	ವಿನಿಯೋಗಿಸಿದ ಮೊತ್ತ
1.	ಪುರಸಭಾ ಕಛೇರಿ ಆವರಣದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ	80.00	
2	ತರಕಾರಿ ಮಾರುಕಟ್ಟೆ ನಿರ್ಮಾಣ	13.00	
3	ಹಣ್ಣು ಮತ್ತು ತರಕಾರಿ ಸಂರಕ್ಷಣೆಗಾಗಿ ಕೋಲ್ಡ್	47.00	
4	ರಸ್ತೆ ಕಾಮಗಾರಿಗಳಿಗೆ (ಎರಡು)	23.75	23.50
5	ಬೀದಿ ದೀಪಗಳಿಗೆ	30.50	16.50

ಆ) ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.

ಇ) ಬಿಡುಗಡೆಯಾದ ರೂ. 72.83 ಲಕ್ಷಗಳಲ್ಲಿ ರೂ. 40.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಈ) ಯೋಜನೆಯ ಮಾರ್ಗಸೂಚಿಯನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು 3 ವರ್ಷಗಳ ಕಾಲಮಿತಿ ಇರುತ್ತದೆ.

684(497) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿಗಾಗಿ 6.3 ಕೋಟಿ ರೂ. ಬಿಡುಗಡೆಯಾಗಿದ್ದು ನಿಜವೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗಿದೆ;

ಇ) ಕಾಮಗಾರಿಯ ಇಂದಿನ ಸ್ಥಿತಿ ಏನು;

ಈ) ಈ ಕಾಮಗಾರಿ ಮುಗಿಸಲು ಕಾಲಮಿತಿ (Time limit) ಹಾಕಲಾಗಿದೆಯೇ;

ಉ) ನಿಗಧಿತ ಸಮಯದಲ್ಲಿ ಮುಗಿಯದಿದ್ದರೆ, ಸರ್ಕಾರ ಏನು ಕ್ರಮ ಕೈಗೊಳ್ಳುವುದು;

ಊ) ಈ ಕುಡಿಯುವ ನೀರಿನ ಯೋಜನೆಯಲ್ಲಿ ವಿತರಣಾ ಕಾಲುವೆ ಇಲ್ಲದೆ ಇರುವುದು ಸರ್ಕಾರ ಗಮನದಲ್ಲಿದೆಯೇ; ಹಾಗೂ ವಿತರಣಾ ಮಾರ್ಗ ಇಲ್ಲದೆ ಈ ಕೆಲಸ ಮುಗಿಸುವುದು ಸಾಧ್ಯವಿಲ್ಲದಿರುವುದರಿಂದ ಇದಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯ ರೂ. 603.20 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಈ ಯೋಜನೆಗೆ 2003–2004ನೇ ಸಾಲಿನ ಮಾರ್ಚ್ 2004ರಲ್ಲಿ ರೂ. 251.24 ಲಕ್ಷ ಜೀವ ವಿಮಾ ನಿಗಮದಿಂದ ಸಾಲ ಬಿಡುಗಡೆಯಾಗಿರುತ್ತದೆ.

ಆ) ಸದರಿ ಯೋಜನೆ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಮೆ:ಜಿ.ವಿ.ಪಿ.ಆರ್. ಇಂಜಿನಿಯರ್ ಲಿ., ಹೈದರಾಬಾದ್ ಇವರಿಗೆ ದಿನಾಂಕ 20–10–2003ರಲ್ಲಿ ವಹಿಸಿ ಕೊಡಲಾಗಿದೆ. ನವೆಂಬರ್ 2003ರಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಇ) ಸದರಿ ಯೋಜನೆಯಡಿ ಜಾಕ್‌ವೆಲ್ ಕಂ ಪಂಪ್ ಹೌಸ್ ಕಾಮಗಾರಿಯ ಪೌಂಡೇಶನ್ ಪೂರ್ಣಗೊಳಿಸಿ ಸ್ಟೀನಿಂಗ್ ಕೆಲಸ ಪ್ರಗತಿಯಲ್ಲಿರುತ್ತದೆ. ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ಭೂ ಮಟ್ಟದಿಂದ 3 ಮಿ. ಎತ್ತರದವರೆಗೆ ಪೂರ್ಣಗೊಳಿಸಲಾಗಿದ್ದು ಉಳಿದ ಕೆಲಸಗಳು ಪ್ರಗತಿಯಲ್ಲಿವೆ. ಕಾರಂಜಾ ನದಿಗೆ ಅಡ್ಡಲಾಗಿ ನಿರ್ಮಿಸಬೇಕಾದ ಬ್ಯಾರೇಜ್ ಕಾಮಗಾರಿಯ ವಿನ್ಯಾಸ ಮತ್ತು ಅಂದಾಜು ತಾಂತ್ರಿಕ ಪರಿಶೀಲನೆಯಲ್ಲಿದೆ. ಹಾಗೂ 120 ಅಶ್ವಶಕ್ತಿ ಡೀಪ್‌ವೆಲ್ ಟರ್ಬೈನ್ ಪಂಪ್‌ಸೆಟ್ ಮತ್ತು ಅಶ್ವಶಕ್ತಿಯ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ) ಈ ಯೋಜನೆಯಡಿ ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ತೆಗೆದುಕೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮೇ 2005ವರೆಗೆ ಕಾಲಮಿತಿ ನಿಗದಿಪಡಿಸಲಾಗಿದೆ. ಈ ಕಾಮಗಾರಿಗಳಿಗೆ ಸಕಾಲದಲ್ಲಿ ಆರ್ಥಿಕ ಸಂಸ್ಥೆಗಳಿಂದ ಸಾಲ ಒದಗಿ ಬಂದಲ್ಲಿ ಸದರಿ ಯೋಜನೆಯನ್ನು ಮೇ 2005ರೊಳಗಾಗಿ ಪೂರ್ತಿಗೊಳಿಸಿ ಚಾಲನೆಗೊಳಿಸಲಾಗುವುದು.

ಉ) ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಯೋಜನೆಯಡಿ ವಿತರಣಾ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗೆ ಅವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಾರಣ ವಿತರಣಾ ಜಾಲ ಅಳವಡಿಸುವ ಸಲುವಾಗಿ ಪ್ರತ್ಯೇಕವಾಗಿ ಅಂದಾಜನ್ನು ತಯಾರಿಸಲು ಕ್ರಮ ಜರುಗಿಸಲಾಗುವುದು.

685(496) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಲ್ಕಿ ಪುರಸಭೆಯಲ್ಲಿ ಚುನಾಯಿತ ಸದಸ್ಯರ ಸಮಿತಿಯ ಅನುಮೋದನೆ ಇಲ್ಲದೆ ರೂ.25.00 ಲಕ್ಷ ಹಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹಣದ ಅವ್ಯವಹಾರದ ಬಗ್ಗೆ ಪುರಸಭೆಯ ಸಾಮಾನ್ಯ ಸಭೆಯಲ್ಲಿ ತನಿಖೆ ನಡೆಸುವಂತೆ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಮನವಿ ಮಾಡಿರುವುದು ನಿಜವೇ;